ಬಿಡಿಸಿಕೊಳ್ಳುವಂತೆ ಸುಬ್ಬುಲು ಸೂಚಿಸಿದಳು. ಇದು ಚಿನ್ನಪಾಪಲುವಿಗೆ ಸರಿಯೆನಿಸಿತು. ಇಬ್ಬರೂ ಕೂಡಿ ವೆಂಕಟಸಾಮಿಯನ್ನು ಮುಂದುಮನುಷ್ಯನನ್ನಾಗಿ ಇಟ್ಟು ಕೊಂಡು ತಿಮ್ಮಿರೆಡ್ಡಿ ಮನೆಗೆ ಹೋದರು. ತಿಮ್ಮಿರೆಡ್ಡಿಗೆ ಆ ಹೊಲವನ್ನು ಬಿಟ್ಟುಕೊಡುವ ಮನಸ್ಸಿರಲಿಲ್ಲ. ಹಾಗಾಗಿ ಸೇಕರಿ ಬರದೆ ಇದು ಬಗೆಹರಿಯದು ಅಂದ. ಅವನಿಗೆ ಆ ಹೊಲ ತನ್ನ ಅಧೀನದಲ್ಲೇ ಇರಬೇಕಿತ್ತು. ರಾಗಿ ಬೆಳೆಗೆ ಉತ್ತಮವಾದ ಕೆಂಪುಮಣ್ಣಿನ ನೆಲವದು. ತನ್ನ ಹೊಲಕ್ಕೆ ಹೋಗಲು ದಾರಿ ಅದರಲ್ಲಿಯೇ ಇತ್ತು. ಅದನ್ನು ಕ್ರಯಕ್ಕೆ ಪಡೆಯುವ ಯೋಚನೆಯೂ ಇತ್ತು. ಆದರೆ



ಸೇಕರಿಯ ಪರಾರಿ ಆ ಯೋಚನೆಗೆ ಕಲ್ಲು ಹಾಕಿತ್ತು. ಈ ಅನುಕೂಲಗಳಿಂದಾಗಿ ಅವನು ಸೇಕರಿ ಇರಬೇಕೆಂದು ತಕರಾರು ತೆಗೆದದ್ದು. ಪರಿಸ್ಥಿತಿ, ಸಂದರ್ಭ ನಾಲ್ಕು ಜನರನ್ನು ಕೂರಿಸಿ ಮಾತನಾಡುವುದಾಗಿರಲಿಲ್ಲ. ಏಕೆಂದರೆ ಆ ಜಮೀನಿನ ಮೇಲೆ ಕೆಲವರ ಕಣ್ಣಿತ್ತು. ವ್ಯವಹಾರ ಬೆಣ್ಣೆಯಲ್ಲಿ ಕೂದಲು ತೆಗೆದಂತಿರಬೇಕೆಂದು ವೆಂಕಟಸಾಮಿಗೆ ಮನವರಿಕೆಯಾಗಿತ್ತು. ವೆಂಕಟಸಾಮಿ ಮಾತುಕತೆಯಲ್ಲಿರುವಾಗ ಸುಬ್ಬುಲು ಅಡುಗೆ ಮನೆಗೆ ಹೋಗಿ ತಿಮ್ಮಿರೆಡ್ಡಿಯ ಮಡದಿಯೊಂದಿಗೆ ಮಾತನಾಡಿ ಬಂದಳು. ಆಕೆ ಬಂದು ಗೋಡೆಗೊರಗಿ ನಿಂತಳು.

ಎಷ್ಟೇ ಮಾತಾಡಿದರೂ ತಿಮ್ಮಿರೆಡ್ಡಿ ಸೇಕರಿಯಲ್ಲಿಗೇ ಮಾತು ತಂದು ನಿಲ್ಲಿಸುತ್ತಿದ್ದ. ತಿಮ್ಮಿರೆಡ್ಡಿಯ ಹೆಂಡತಿ 'ಏನೂಂದ್ರೆ' ಎಂದು ಒಳಗೆ ಹೋದಳು. ತಿಮ್ಮಿರೆಡ್ಡಿ ಅವಳ ಹಿಂದೆ ಹೋದ. ಸುಮಾರು ಹೊತ್ತಿನ ನಂತರ ಇಬ್ಬರೂ ಹೊರ ಬಂದರು. ನಿಮ್ಮ ಹೊಲದ ಮೇಲೆ ನಮ್ಮ ಹೊಲಕ್ಕೆ ಹೋಗಲು ಚಿನ್ನಪಾಪಲು ತಕರಾರು ಮಾಡೊಲ್ಲವ ಅಂದಳು ತಿಮ್ಮಿರೆಡ್ಡಿ ಹೆಂಡತಿ. ತಕ್ಷಣವೇ ಸುಬ್ಬುಲು ಮಾಡಲ್ಲ ಅಂದಳು. ಆ ಮಾತನ್ನು ಚಿನ್ನಪಾಪಲು ಹೇಳಬೇಕೆಂದ ತಿಮ್ಮಿರೆಡ್ಡಿ. ಸುಬ್ಬುಲು ಅವಳ ತೊಡೆ ಗಿಲ್ಲಿದಳು. ಚಿನ್ನಪಾಪಲು ಮಾಡಲ್ಲ ಅಂದಳು. ಭೋಗ್ಯಕ್ಕೇ ಹಾಕ್ಕೊಂಡಿರಬೋದು, ಬಡ್ಡಿ ಕೊಡೋ ಮಾತಾಗಿತ್ತು. ಅದನ್ನು ಕೊಡಬೇಕಾಗುತ್ತೆ. ದಾರಿ ಬಿಡೊ ವಿಚಾರಾನ ಬಿಡುಗಡೆ ಪತ್ರದಲ್ಲಿ ಬರೀಬೇಕಾಗುತ್ತೆ ಅಂದ ತಿಮ್ಮಿರೆಡ್ಡಿ. ಬಡ್ಡಿ ವಿಚಾರ ಬಿಟ್ಟರೆ ಈ ಮಾತು ನ್ಯಾಯವಾದ್ದೇ ಅಂದ ವೆಂಕಟಸಾಮಿ. ನನ್ನ ಜಮೀನೇ ಅನ್ನೋ ಹಾಗೆ ಆಬಾದು ಮಾಡಿಕೊಂಡಿರೋದು ನಿನಗೂ ಗೊತ್ತಿರೋದೆ ವೆಂಕಟಸಾಮಿ ಅಂದ ತಿಮ್ಮಿರೆಡ್ಡಿ. ಗೊತ್ತು ಗೊತ್ತು. ಆದ್ರೂ.... ಆಯ್ತು, ಬಡ್ಡಿ ಲೆಕ್ಕ ಮಾಡೋವಾಗ ಕೊಂಚ ನೋಡ್ಕೊ. ಕಷ್ಟದಲ್ಲಿ ಅಂದ್ರೆ ಕಷ್ಟದಲ್ಲಿರೊ ಹೆಣ್ಣೊಂಗ್ಸು ಅಂದ ವೆಂಕಟಸಾಮಿ.

ದುಡ್ಡಿಗೆ ಕುರಿಗಳ ಮಾರೋದು ತಾನೆ? ನನಗೇ ಇರಲಿ. ಬೆಲೆಕಟ್ಟಿ ಅಂದ ತಿಮ್ಮಿರೆಡ್ಡಿ. ಮಂದೇಲಿ ಇಪ್ಪತ್ತಾರು ಕುರಿಗಳಿವೆ. ಐದು ಪಟ್ಲಿ (ಟಗರು), ಉಳಿದೋವು ಮರಿಗಳು. ಮರಿಗಳನ್ನ ತಲೆ ಲೆಕ್ಕದಲ್ಲಿ, ಪಟ್ಲಿಗಳನ್ನ ಕೆಜಿ ಲೆಕ್ಕದಲ್ಲಿ ಬೆಲೆ ಕಟ್ಟಾಣ ಅಂದ ವೆಂಕಟಸಾಮಿಯ ಮಾತಿಗೆ, ನಾಯೇನು ಮಾಂಸಕ್ಕೆ ಕೊಳ್ಳೋನ? ಮೇಸಾಕೆ. ನಾಳೆ ನಂಗೂ ನಾಲ್ಕು ಕಾಸು ಹುಟ್ಟಬೇಕು ಅಂದ ತಿಮ್ಮಿರೆಡ್ಡಿ.

ವೆಂಕಟಸಾಮಿ ಹಾಗು ತಿಮ್ಮಿರೆಡ್ಡಿ ಆಚೆಗೆ ಹೋದರು. ಹೆಂಗಸರು ಎಲೆಯಡಿಕೆ ಮುಂದಿಟ್ಟುಕೊಂಡು ಕುಳಿತರು. ತೀರ್ಮಾನ ಆದೀತ ಅಂದಳು ಚಿನ್ನಪಾಪಲು. ಆಗದೆ ಇದ್ದಾತಾ ಅಂದಳು ತಿಮ್ಮಿರೆಡ್ಡಿ ಹೆಂಡತಿ.

ಸುಮಾರು ಹೊತ್ತಿನ ನಂತರ ಆ ಇಬ್ಬರೂ ಬಂದರು. ಚಿನ್ನಪಾಪಲು ಕುರಿಮಂದೆ ಕೊಡುವುದು, ತಿಮ್ಮಿರೆಡ್ಡಿ ಜಮೀನು ಬಿಟ್ಟುಕೊಡುವುದೆಂದು ವೆಂಕಟಸಾಮಿ ಫೈಸಲ್ ಮಾತಾಡಿದ. ●